# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ

**6ನೇ ಅಡ್ಡರಸ್ತೆ, ಮಲ್ಲೇಶ್ವರಂ,ಬೆಂಗಳೂರು–560003**

ಸಂಖ್ಯೆ:ವಿ1/ವಿಸಪ/ಫ.ಪ್ರ/50/2012 ದಿನಾಂಕ: 29–01–2013

**ಜ್ಞಾಪ ನ**

ವಿಷಯ: ಅಕ್ಟೋಬರ್ 2012 ರ ಮಾಹೆಯಲ್ಲಿ ನಡೆದ ಸಂಗೀತ, ನೃತ್ಯ, ತಾಳವಾದ್ಯ ಪರೀಕ್ಷೆಯ ಫಲಿತಾಂಶ ಪ್ರಕಟಣೆ ಕುರಿತು.

><><><><

ಅಕ್ಟೋಬರ್ 2012 ರಲ್ಲಿ ನಡೆದ ಸಂಗೀತ, ನೃತ್ಯ, ತಾಳವಾದ್ಯ ಪರೀಕ್ಷೆಯ ಫಲಿತಾಂಶ ಪಟ್ಟಿಯನ್ನು ಕಳುಹಿಸಿಕೊಡಲಾಗಿದೆ. ಸದರಿ ಫಲಿತಾಂಶವನ್ನು ದಿನಾಂಕ: 02–02–2013 ರಂದು ಬೆಳಿಗ್ಗೆ 10–00 ಗಂಟೆಗೆ ನಿಮ್ಮ ಕೇಂದ್ರದಲ್ಲಿ ಪ್ರಕಟಿಸುವುದು.

ನಿಮ್ಮ ಕೇಂದ್ರದಿಂದ ಈಗಾಗಲೇ ಬಂದಂತಹ ಎಲ್ಲಾ ತಿದ್ದುಪಡಿ (ಅಭ್ಯರ್ಥಿ ಹೆಸರು, ತಂದೆ ಹೆಸರು, ವಿಷಯ ಸಂಕೇತ– ಬದಲಾವಣೆ) ದೋಷವನ್ನು ಸರಿಪಡಿಸಲಾಗಿದೆ. ಈ ಬಗ್ಗೆ ಸಂಸ್ಥೆಯ ಮುಖ್ಯಸ್ಥರಿಗೆ/ವಿದ್ಯಾರ್ಥಿಗಳಿಗೆ ಫಲಿತಾಂಶ ಪಟ್ಟಿಯಲ್ಲಿ ತಕ್ಷಣವೇ ಪರಿಶೀಲಿಸಿಕೊಳ್ಳಲು ತಿಳಿಸತಕ್ಕದ್ದು. ತಿದ್ದುಪಡಿಗೆ ಅರ್ಜಿ ಸಲ್ಲಿಸದೇ ಇರುವ ವಿದ್ಯಾರ್ಥಿಗಳು ಸದರಿ ಫಲಿತಾಂಶ ಪಟ್ಟಿಯಲ್ಲಿ ಅಭ್ಯರ್ಥಿಯ / ತಂದೆಯ ಹೆಸರಿನಲ್ಲಿ ಏನಾದರೂ ವ್ಯತ್ಯಾಸ ಇದ್ದಲ್ಲಿ ಹಾಗೂ ಥಿಯರಿ ಅಂಕಗಳು ಬಂದು ಪ್ರಾಕ್ಟಿಕಲ್ ಅಂಕಗಳು ಬಾರದೇ ಇರುವಂತಹ ದೋಷಗಳು ಕಂಡು ಬಂದಲ್ಲಿ ಅಭ್ಯರ್ಥಿ ಪ್ರಾಕ್ಟಿಕಲ್‌ಗೆ ಹಾಜರಾದ ದಿನಾಂಕ ಮತ್ತು ಬೋರ್ಡಿನ ಸಂಖ್ಯೆ ಬರೆದು ಪ್ರವೇಶ ಪತ್ರದ ಜೆರಾಕ್ಸ್ ಪ್ರತಿ ಹಾಗೂ ಫಲಿತಾಂಶ ಪಟ್ಟಿಯ ಜೆರಾಕ್ಸ್ ಪ್ರತಿ ಲಗತ್ತಿಸಿ, **ಸಂಸ್ಥೆಯ ಮುಖ್ಯಸ್ಥರ ಮೂಲಕ/ವಿದ್ಯಾರ್ಥಿಗಳು ಖುದ್ದಾಗಿ 15–02–2013 ರ ಒಳಗೆ** " **ಶ್ರೀಮತಿ. ಶ್ರೀವಲ್ಲಿ, ಸಹಾಯಕ ನಿರ್ದೇಶಕರು, ಸಂಗೀತ ಶಾಖೆ, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ ಬೆಂಗಳೂರು–3** ಈ ವಿಳಾಸಕ್ಕೆ ತಲುಪುವಂತೆ ಕಳುಹಿಸಿಕೊಡಲು ಸೂಚಿಸಿದೆ. ಹೆಸರು ತಿದ್ದುಪಡಿಗಾಗಿ ಇನ್ನು ಮುಂದೆ ಪ್ರಸ್ತಾವನೆಯನ್ನು ಸಲ್ಲಿಸಿದಲ್ಲಿ ಪ್ರತಿ ಅಭ್ಯರ್ಥಿಗೆ ರೂ 100/–ಗಳ ದಂಡ ಶುಲ್ಕ ಹಾಗೂ ಇತರೇ ಅಗತ್ಯ ದಾಖಲೆಗಳೊಂದಿಗೆ ಸಲ್ಲಿಸುವುದು.

ಮರು ಎಣಿಕೆಗೆ ಮತ್ತು ಉತ್ತರ ಪತ್ರಿಕೆಯ (ಥಿಯರಿ ಮಾತ್ರ) ಛಾಯಾ ಪ್ರತಿಗಾಗಿ ಅರ್ಜಿ ಸಲ್ಲಿಸಲು **ಕೊನೆಯ ದಿನಾಂಕ: 15–02–2013** ನಿಗಧಿಪಡಿಸಲಾಗಿದೆ.

1. ನೇರವಾಗಿ ಮರು ಎಣಿಕೆಗೆ ಅರ್ಜಿ ಸಲ್ಲಿಸಿದಲ್ಲಿ ಉತ್ತರ ಪತ್ರಿಕೆಯ ಛಾಯಾಪ್ರತಿ ಪಡೆಯಲು ಹಾಗೂ ಮರು ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಲು ಅವಕಾಶ ಇರುವುದಿಲ್ಲ.

2. ಉತ್ತರ ಪತ್ರಿಕೆಯ ಛಾಯಾ ಪ್ರತಿ ಪಡೆದವರಿಗೆ ಮಾತ್ರ ಮರು ಮೌಲ್ಯಮಾಪನಕ್ಕೆ ಅವಕಾಶ ಕಲ್ಪಿಸಲಾಗಿದೆ.

3. ಉತ್ತರ ಪತ್ರಿಕೆಯ ಛಾಯಾ ಪ್ರತಿ ಅಭ್ಯರ್ಥಿಗೆ/ಅರ್ಜಿದಾರರಿಗೆ ತಲುಪಿದ 07 ದಿನಗಳೊಳಗಾಗಿ ಮರುಮೌಲ್ಯಮಾಪನ ಕೋರಿ ನಿಗಧಿತ ಶುಲ್ಕ ಪಾವತಿಸಿ ಮಂಡಳಿಯಿಂದ ಕಳುಹಿಸಿರುವ ನಮೂನೆಯಲ್ಲಿ ಅರ್ಜಿ ಸಲ್ಲಿಸುವುದು.

4. ಬ್ಯಾಂಕ್ ಹುಂಡಿಯನ್ನು **SECRETARY, K.S.E.E.B,BANGALORE** ಈ ಪದನಾಮಕ್ಕೆ ಪಡೆದು ಸಲ್ಲಿಸುವುದು. ಅಥವಾ ಈ ಜ್ಞಾಪನದೊಂದಿಗೆ ಲಗತ್ತಿಸಿರುವ ಮಂಡಳಿಯ **NEFT** ಚಲನ್ ಮೂಲಕ ಹಣವನ್ನು ಯಾವುದಾದರೂ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಪಾವತಿಸಿ, ಚಲನ್ ಪ್ರತಿಯನ್ನು ಅರ್ಜಿಯೊಂದಿಗೆ ಸಲ್ಲಿಸುವುದು.

# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ

**6ನೇ ಅಡ್ಡರಸ್ತೆ, ಮಲ್ಲೇಶ್ವರಂ,ಬೆಂಗಳೂರು–560003**

**ಮರು ಎಣಿಕೆ / ಛಾಯಾ ಪ್ರತಿ / ಮರು ಮೌಲ್ಯಮಾಪನ ಶುಲ್ಕದ ವಿವರ ಕೆಳಕಂಡಂತಿರುತ್ತದೆ.**

| | | |
|---|---|---|
| 1. | ಮರು ಎಣಿಕೆ(ಲಿಖಿತ/ಪ್ರಾಯೋಗಿಕ ಪರೀಕ್ಷೆಗಳು) | ಒಂದು ವಿಷಯಕ್ಕೆ ಶುಲ್ಕ ರೂ. 150–00 |
| 2. | ಉತ್ತರಪತ್ರಿಕೆ ಛಾಯಾಪ್ರತಿ(ಲಿಖಿತ ಪರೀಕ್ಷೆ ಮಾತ್ರ ) | ಒಂದು ವಿಷಯಕ್ಕೆ ಶುಲ್ಕ ರೂ. 300–00 |
| 3. | ಛಾಯಾ ಪ್ರತಿ ಪಡೆದ ನಂತರ ಮರು ಮೌಲ್ಯಮಾಪನಕ್ಕೆ | ಒಂದು ವಿಷಯಕ್ಕೆ ಶುಲ್ಕ ರೂ. 700–00 |

**ಸೂಚನೆ : ಇನ್ನು ಮುಂದೆ ಸಂಗೀತ ಪರೀಕ್ಷೆಗೆ ಸಂಬಂಧಿಸಿದ ಎಲ್ಲಾ ಸುತ್ತೋಲೆಗಳು, ನಮೂನೆಗಳು ಹಾಗೂ ಹಣ ಪಾವತಿಯ ಚಲನ್‌ಗಳು ಇತ್ಯಾದಿ ಎಲ್ಲಾ ಮಾಹಿತಿಯನ್ನು ಮಂಡಳಿಯ ವೆಬ್‌ಸೈಟ್ ವಿಳಾಸ www.kseeb.kar.nic.in ನಲ್ಲಿ ಪಡೆಯುವಂತೆ ಸಂಬಂಧಿಸಿದ ಸಾರ್ವಜನಿಕರ ಗಮನಕ್ಕೆ ತರಲು ಈ ಮೂಲಕ ತಿಳಿಸಿದೆ.**

ಸಹಿ/–
**ನಿರ್ದೇಶಕರು**
**(ಇತರೆ ಪರೀಕ್ಷೆಗಳು)**

**ಗೆ,**

1) ಅಕ್ಟೋಬರ್–2012 ರ ವಿಶೇಷ ಸಂಗೀತ, ನೃತ್ಯ ಹಾಗೂ ತಾಳವಾದ್ಯ ಪರೀಕ್ಷಾ ಕೇಂದ್ರಗಳಿಗೆ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.

**ಪ್ರತಿಗಳು**

1) ಮಾನ್ಯ ಆಯುಕ್ತರು ಸಾ.ಶಿ.ಇ, ಬೆಂಗಳೂರು ರವರಿಗೆ ವಂದನಾಪೂರ್ವಕವಾಗಿ ಸಲ್ಲಿಸಿದೆ.
2) ಜಂಟಿ ನಿರ್ದೇಶಕರು ಹಾಗೂ ಪದನಿಮಿತ್ತ ಸಹ ನಿರ್ದೇಶಕರು, ಬೆಂಗಳೂರು,ಮೈಸೂರು,ಬೆಳಗಾಂವ ಮತ್ತು ಗುಲಬರ್ಗಾ ರವರಿಗೆ ಮಾಹಿತಿಗಾಗಿ
3) ರಾಜ್ಯದ ಎಲ್ಲಾ ಡಯಟ್ ಪ್ರಾಂಶುಪಾಲರಿಗೆ ಮಾಹಿತಿಗಾಗಿ.